ಕರೆದುಕೊಂಡರು. ಒಂದು ದಿನ ಜಮ್ನಾಲಾಲ್ ಬಜಾಜ್ ಲೋಹಿಯಾರನ್ನು ಗಾಂಧೀಜಿಯ ಬಳಿ ಕರೆದುಕೊಂಡು ಹೋದರು. ಅವತ್ತಿನ ಅನುಭವ ಕುರಿತು ಲೋಹಿಯಾ ಬರೆಯುತ್ತಾರೆ:

‘ನಾನು ಗಾಂಧೀಜಿಯವರ ಪಕ್ಕದ ಕೋಣೆಯಲ್ಲಿ ಮಲಗಿದ್ದೆ. ಆಗೆಲ್ಲ ತಡವಾಗಿ ಏಳುವುದು ನನ್ನ ರೂಢಿ. ಜಮ್ನಾಲಾಲ್ ಬಜಾಜ್ ನನ್ನನ್ನು ಹಾಸಿಗೆಯಿಂದೆಳೆದು ಎಚ್ಚರಿಸಿದರು. ಗಾಂಧೀಜಿಯವರಿಗೆ ಹೆಚ್ಚು ಸಮಯವಿರಲಿಲ್ಲ. ಒಂದು ಗಂಟೆಯ ನಂತರ ನಾನು ಕಲ್ಕತ್ತಾಗೆ ಹೊರಡಬೇಕಾಗಿತ್ತು. ಅದೇ ಮಂಪರು ಸ್ಥಿತಿಯಲ್ಲಿ ನನ್ನನ್ನೊಯ್ದು ಅವರೆದುರು ನಿಲ್ಲಿಸಲಾಯಿತು. ಪ್ರಾಯಶಃ ಗಾಂಧೀಜಿ ಕೇಳಿದ ಪ್ರಶ್ನೆಯೆಂದರೆ, ‘ಹೊಟ್ಟೆ ಬಟ್ಟೆಗೆ ಅನುಕೂಲವಾಗಿರುವ ಮನೆತನದವರೇ ನೀವು?’ ಆ ವಿಷಯವಾಗಿ ಅವರು ಚಿಂತಿಸಬೇಕಾದ ಅಗತ್ಯವಿಲ್ಲ ಎಂದು ಜಮ್ನಾಲಾಲ್ ಹೇಳಿದರು. ಗಾಂಧೀಜಿಯ ಎದೆಭಾರ ಇಳಿದಂತೆನಿಸಿತು. ‘ಹಾಗಾದರೆ ಪರವಾಗಿಲ್ಲ. ನಾವು ಮತ್ತೆ ಭೇಟಿಯಾಗೋಣ’ ಎಂದರು. ಗಾಂಧೀಜಿಯಂಥ ವ್ಯಕ್ತಿ ತಾನು ಎತ್ತಿಕೊಳ್ಳುವ ಪ್ರತಿಯೊಂದು ಪ್ರಶ್ನೆಯ ವಿವರವನ್ನೂ ತಿಳಿಯಬಯಸುತ್ತಿದ್ದುದು ಸಹಜವಾಗಿತ್ತು. ರಾಜಕೀಯದಲ್ಲಿ ನನಗೆ ಆಸಕ್ತಿಯಿರುವುದನ್ನು ಕುರಿತು ಯಾರೋ ಅವರಿಗೆ ಹೇಳಿದ್ದರೆಂದು ಕಾಣುತ್ತದೆ. ಅಷ್ಟೊತ್ತಿಗಾಗಲೇ ನಾನು ಕಾನೂನುಭಂಗ ಚಟುವಟಿಕೆಯಲ್ಲಿ ತೊಡಗಿದ್ದೆ. ನನ್ನ ಸ್ಥಿತಿ ಹೇಗಿದೆಯೆಂದು ತಿಳಿದುಕೊಳ್ಳುವುದಷ್ಟೇ ಅವರ ಉದ್ದೇಶವಾಗಿರಲೂಬಹುದು.’

ಸ್ವತಂತ್ರ ವ್ಯಕ್ತಿತ್ವದ ಲೋಹಿಯಾಗೆ ಜಮ್ನಾಲಾಲ್ ಬಜಾಜರ ಹಂಗಿನರಮನೆಯಲ್ಲಿ ಇರಲಾಗಲಿಲ್ಲ. ಸ್ವಾತಂತ್ರ್ಯ ಚಳುವಳಿ ಮತ್ತು ದೇಶದ ರಾಜಕಾರಣ ಅವರನ್ನು ಕರೆಯುತ್ತಿದ್ದವು. ಕಲ್ಕತ್ತಾದ ತಮ್ಮ ಸಮಾಜವಾದಿ ಗೆಳೆಯರನ್ನು ಸಂಪರ್ಕಿಸಿದರು. ಅಪ್ಪ, ಮಗ ಇಬ್ಬರೂ ಪೂರ್ಣ ಪ್ರಮಾಣದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಇಳಿದರು. ಇಬ್ಬರಿಗೂ ಇರಲು ನೆಲೆಯಿರಲಿಲ್ಲ. ಅಪ್ಪ ಸಂಬಂಧಿಗಳ ಮನೆಯಲ್ಲಿ; ಮಗ ಗೆಳೆಯರ ಮನೆಯಲ್ಲಿ. ಹೀಗೆ ಅಪ್ಪ, ಮಗನ ಚಳುವಳಿ ಜೀವನ ನಡೆಯತೊಡಗಿತು.

ಲೋಹಿಯಾಗೆ ದಿನಕ್ಕೆರಡು ಊಟ, ಒಮ್ಮೊಮ್ಮೆ ಒಂದು ಊಟ ಮಾತ್ರ ಸಿಗುತ್ತಿತ್ತು. ದಿನವೆಲ್ಲಾ ಬಿಡುವಿಲ್ಲದ ಓಡಾಟ. ರಾತ್ರಿಯಿಡೀ ಓದು, ಬರಹ. ತಡರಾತ್ರಿ ನಿದ್ರೆ. ಮಾರನೆಯ ಬೆಳಗ್ಗೆ ತಡವಾಗಿ ಎದ್ದು ಮತ್ತೆ ಚಳುವಳಿಯ ಕೆಲಸ. ಇದು ಲೋಹಿಯಾ ದಿನಚರಿಯಾಯಿತು.

ಹದಿಹರೆಯದಲ್ಲಿಚಳುವಳಿಗೆಇಳಿದಾಗಿನಿಂದಲೂ ಗಾಂಧೀಜಿ ಮತ್ತು ನೆಹರು ಲೋಹಿಯಾರ ನೆಚ್ಚಿನ ನಾಯಕರಾಗಿದ್ದರು. ಲೋಹಿಯಾ ಪೂರ್ಣ ಪ್ರಮಾಣದಲ್ಲಿ ಚಳುವಳಿಗೆ ಇಳಿಯುವ ಹೊತ್ತಿಗೆ ಗಾಂಧೀಜಿ ಸ್ವಾತಂತ್ರ್ಯ ಚಳುವಳಿಯನ್ನು ಸಮಾಜ ಪರಿವರ್ತನೆಯ ಚಳುವಳಿಯನ್ನಾಗಿಸಿದ್ದರು. ಅಸ್ಪೃಶ್ಯತೆಯ ವಿರುದ್ಧ ಸಮರ ಸಾರಿದ್ದ ಗಾಂಧೀಜಿ ಭಾರತದುದ್ದಕ್ಕೂ ರೈಲು, ಕಾರು, ಎತ್ತಿನ ಗಾಡಿಗಳ ಪಯಣ ಹಾಗೂ ಕಾಲ್ನಡಿಗೆಯ ಮೂಲಕ ಸುಮಾರು 20000 ಕಿಲೋಮೀಟರ್ ಸುತ್ತಿದ್ದರು. ಸಾಮಾಜಿಕ ಕಾರ್ಯಕರ್ತರು ಎಲ್ಲ ಕೆಲಸಗಳನ್ನೂ ಬದಿಗೊತ್ತಿ ಹಳ್ಳಿಗಳಿಗೆ ಹಿಂತಿರುಗಿ ಅಸ್ಪೃಶ್ಯತೆಯನ್ನು ಹೊಡೆದೋಡಿಸಬೇಕು; ಹರಿಜನರ ಆರ್ಥಿಕ, ಸಾಮಾಜಿಕ ಏಳಿಗೆಗಾಗಿ ದುಡಿಯಬೇಕು ಎಂದು ಗಾಂಧೀಜಿ ಕರೆ ಕೊಡುತ್ತಿದ್ದರು.

ಆದರೆ ಅಸ್ಪೃಶ್ಯತೆಯನ್ನು ಸಮರ್ಥಿಸುತ್ತಿದ್ದ ಸಂಪ್ರದಾಯವಾದಿಗಳು ಗಾಂಧೀಜಿಯವರ ಇಂಥ ಸಮಾಜ ಪರಿವರ್ತನೆಯ ಚಟುವಟಿಕೆಗಳನ್ನು ವಿರೋಧಿಸಿ ಕರಪತ್ರ ಹಂಚುತ್ತಿದ್ದರು; ಗಾಂಧೀಜಿಯ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳನ್ನು ವಿರೋಧಿಸಿ ಪ್ರತಿಭಟಿಸುತ್ತಿದ್ದರು, ಗಾಂಧೀಜಿಗೆ ಅಡ್ಡಿಯುಂಟು ಮಾಡುತ್ತಿದ್ದರು. ಕೆಲವು ಸಾಂಪ್ರದಾಯಿಕ ಗುಂಪುಗಳತೂ ಬ್ರಿಟಿಷ್ ಸರ್ಕಾರದ ಪರ ನಿಂತು ‘ಮಂದಿರ ಪ್ರವೇಶ ಮಸೂದೆಯನ್ನು ಪಾಸು ಮಾಡದಿದ್ದರೆ ನಿಮಗೆ ಬೆಂಬಲ ಕೊಡುತ್ತೇವೆ’ ಎಂದು ಬ್ರಿಟಿಷ್ ಸರ್ಕಾರವನ್ನು ಬೆಂಬಲಿಸಿದ್ದವು; ಹೀಗಾಗಿ ಮಂದಿರ ಪ್ರವೇಶ ಮಸೂದೆ ಬಿದ್ದು ಹೋಯಿತು.

ಭಾರತೀಯ ಸಮಾಜದಲ್ಲಿ ಸಂಪ್ರದಾಯ–ಬದಲಾವಣೆಗಳ ನಡುವೆ ಈ ಬಗೆಯ ತಿಕ್ಕಾಟ ನಡೆಯುತ್ತಿದ್ದ ಕಾಲದಲ್ಲಿ ಪ್ರಜಾಪ್ರಭುತ್ವ ಮಾರ್ಗದ ಮೂಲಕ ಸಮಾಜವಾದಿ ಸಮಾಜ ಸ್ಥಾಪಿಸಬೇಕೆಂಬ ತುಡಿತ, ಆಶಯಗಳು ಕೂಡ ಭಾರತದಲ್ಲಿ ಮೂಡುತ್ತಿದ್ದವು.

ಕಮ್ಯುನಿಸ್ಟ್ ಚಳುವಳಿ ಅಷ್ಟೊತ್ತಿಗಾಗಲೇ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿತ್ತು. ಈ ನಡುವೆ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಕೆಲವು ತರುಣ ಕಮ್ಯುನಿಸ್ಟರು 1930–31 ಹಾಗೂ 1932–34ರ ನಡುವೆ ಜೈಲಿನಲ್ಲಿದ್ದರು. ಮಾರ್ಕ್ಸಿಸ್ಟ್ ಹಾಗೂ ಇನ್ನಿತರ ಧಾರೆಯ ಸಮಾಜವಾದಿ ಚಿಂತನೆಗಳನ್ನು ಅಧ್ಯಯನ ಮಾಡಿದ್ದ ಈ ತರುಣರು ಈ ಫಿಲಾಸಫಿಗಳನ್ನು ವಿವರವಾಗಿ ಚರ್ಚಿಸುತ್ತಾ ಭಾರತಕ್ಕೆ ಅವನ್ನು ಒಗ್ಗಿಸುವ ಬಗ್ಗೆ ಯೋಚಿಸಲಾರಂಭಿಸಿದ್ದರು. ಬ್ರಿಟಿಷ್ ಆಡಳಿತ ಕಾಲದ ಜೈಲುಗಳು ಕೆಲವೊಮ್ಮೆ ವಿವಿಧ ತತ್ವಜ್ಞಾನ, ಸಿದ್ಧಾಂತಗಳನ್ನು ನಂಬಿದ ಧೀಮಂತ ಸ್ವಾತಂತ್ರ್ಯ ಯೋಧರ ಅಧ್ಯಯನದ ಕಾರ್ಯಾಗಾರಗಳಾಗಿದ್ದುದನ್ನು ಕೂಡ ಈ ಅಂಶಗಳು ಸೂಚಿಸುತ್ತವೆ.

ಜೈಲಿನಲ್ಲಿದ್ದ ಈ ಕಮ್ಯುನಿಸ್ಟ್ ತರುಣರು ಉನ್ನತ ಶಿಕ್ಷಣ ಪಡೆದವರಾಗಿದ್ದರು. ಮಾರ್ಕ್ಸಿಸಂ, ಕಮ್ಯುನಿಸಂ ಬಗ್ಗೆ ಅವರಿಗೆ ಒಲವಿತ್ತು; ಆದರೆ ‘ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ’ ಆಗಾಗ್ಗೆ ತಳೆಯುತ್ತಿದ್ದ ರಾಜಕೀಯ ಧೋರಣೆಗಳ ಬಗ್ಗೆ ಅವರಿಗೆ ಭಿನ್ನಾಭಿಪ್ರಾಯಗಳಿದ್ದವು. ಪರ್ಯಾಯ ರಾಜಕೀಯ ಮಾರ್ಗ ಹುಡುಕುತ್ತಿದ್ದ ಈ ತರುಣರು ಕಾಂಗ್ರೆಸ್ ಪಕ್ಷಕ್ಕೆ ಸಮಾಜವಾದಿ ಆಯಾಮ ಕೊಡಬೇಕಾಗಿದೆ ಎಂದು ಯೋಚಿಸತೊಡಗಿದರು. ತರುಣನೇತಾರರಾಗಿದ್ದ ಆಚಾರ್ಯ ನರೇಂದ್ರದೇವ, ಜಯಪ್ರಕಾಶ ನಾರಾಯಣ್, ಮೀನೂ ಮಸಾನಿ ಈ ಗುಂಪಿನ ನಾಯಕರು.

ಅದೇ ಆಗ ಸಂಶೋಧನೆ ಮುಗಿಸಿ ಭಾರತಕ್ಕೆ ಬಂದಿದ್ದ ಲೋಹಿಯಾ ಮಾರ್ಕ್ಸ್‌ವಾದವನ್ನು ಅಧ್ಯಯನ ಮಾಡಿದ್ದರು; ಆದರೆ ಮಾರ್ಕ್ಸ್‌ವಾದದ ಬಗ್ಗೆ ಹಲವು ಪ್ರಶ್ನೆಗಳು ಅವರ ಮನಸ್ಸಿನಲ್ಲಿ ಎದ್ದಿದ್ದವು. ಆ ಕಾಲದಲ್ಲಿ ಮಾರ್ಕ್ಸ್‌ವಾದ ಅನುಷ್ಠಾನವಾಗುತ್ತಿದ್ದ ರೀತಿಯ ಬಗ್ಗೆ ಅವರಿಗೆ ಪೂರ್ಣ ನಂಬಿಕೆಯಿರಲಿಲ್ಲ. ಸೋವಿಯತ್ ಯೂನಿಯನ್ ಮಾದರಿಯ ಕಮ್ಯುನಿಸಂ, ವಿಶ್ವದಲ್ಲಿ ಹೊಸ ವ್ಯವಸ್ಥೆಯ ಸ್ಥಾಪನೆಗಾಗಲೀ, ವಿಶ್ವಶಾಂತಿಯ ಸ್ಥಾಪನೆಗಾಗಲೀ ಸೂಕ್ತವಲ್ಲ ಎಂಬುದು ಲೋಹಿಯಾ ನಂಬಿಕೆಯಾಗಿತ್ತು. ಅವರು ಅಂದು ಯೋಚಿಸಿದ್ದು ಇಂದು ನಿಜವೆಂದು ಸಾಬೀತಾಗಿದೆ.

ಈ ಹಿನ್ನೆಲೆಯಲ್ಲಿ ಭಾರತದ ಮಣ್ಣಿನಲ್ಲೇ ಮೂಡಿದ ಸಮಾಜವಾದವನ್ನು ರೂಪಿಸಬೇಕಾದ ಅಗತ್ಯವಿದೆಯೆಂದು ಭಾರತಕ್ಕೆ ವಾಪಸ್ ಬಂದ ಹೊಸತರಲ್ಲೇ ಲೋಹಿಯಾ ಯೋಚಿಸಲಾರಂಭಿಸಿದ್ದರು.

ಆ ಕಾಲಕ್ಕೆ ಕಾಂಗ್ರೆಸ್ ಹಲ ಬಗೆಯ ಚಿಂತನಾ

## ಕಳೆದ ಸಂಚಿಕೆಯಲ್ಲಿ



ಮಗ ವಿದೇಶಕ್ಕೆ ಹೋಗಿ ಓದಲಿ ಎನ್ನುವುದು ಲೋಹಿಯಾ ತಂದೆ ಹೀರಾಲಾಲರ ಆಸೆಯಾಗಿತ್ತು. ಸ್ವಾತಂತ್ರ್ಯ ಚಳುವಳಿಯ ಆಕರ್ಷಣೆ ಮೀರಿ ಇಂಗ್ಲೆಂಡ್‌ನಲ್ಲಿ ಓದುವ ಆಸೆಯೇ ಹೆಚ್ಚಾಗಿ ಲೋಹಿಯಾ ಲಂಡನ್‌ಗೆ ಹೊರಟರು. ‘ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ’ ಎನ್ನುವ ದ್ವಂದ್ವದಲ್ಲಿದ್ದ ಲೋಹಿಯಾ, ‘ಜರ್ಮನಿಯ ಬರ್ಲಿನ್‌ಗೆ ಹೋಗು. ಅಲ್ಲಿ ಹೊಸ ವಿಚಾರಗಳು ಸಿಗುತ್ತವೆ’ ಎನ್ನುವ ಸಲಹೆಯ ಬೆನ್ನತ್ತಿ ಬರ್ಲಿನ್ ವಿಶ್ವವಿದ್ಯಾಲಯಕ್ಕೆ ಬಂದರು. ಆ ಕಾಲದ ಪ್ರಖ್ಯಾತ ಅರ್ಥಶಾಸ್ತ್ರಜ್ಞರಾಗಿದ್ದ ಪ್ರೊ. ವೆರ್ನರ್ ಸೊಂಬಾರ್ಟ್ ಮಾರ್ಗದರ್ಶನದಲ್ಲಿ ಪಿಎಚ್‌ಡಿ. ಅಧ್ಯಯನದಲ್ಲಿ ತೊಡಗಿದರು. ಗಾಂಧೀಜಿಯ ‘ಉಪ್ಪಿನ ಸತ್ಯಾಗ್ರಹ’ ಅಧ್ಯಯನದ ವಸ್ತುವಾಯಿತು. ವಿವಿಧ ಸಿದ್ಧಾಂತಗಳ ಜನರ ನಡುವೆ ನಡೆಯುತ್ತಿದ್ದ ತೀವ್ರ ರಾಜಕೀಯ ಚರ್ಚೆಗಳಲ್ಲೂ ಲೋಹಿಯಾ ಭಾಗಿಯಾಗುತ್ತಿದ್ದರು. ಹಿಟ್ಲರ್ ಸಭೆಯಲ್ಲೂ ಭಾಗವಹಿಸಿದರು. ಜರ್ಮನಿಯ ರಾಜಕಾರಣದ ಮೇಲೆ ಹಿಟ್ಲರ್ ಹಿಡಿತ ಬಲವಾದಂತೆ, ಲೋಹಿಯಾ ಜರ್ಮನಿ ಬಿಡುವ ಕಾಲ ಸನ್ನಿಹಿತವಾಗತೊಡಗಿತು. ಆದಷ್ಟು ಬೇಗ ಸಂಶೋಧನೆ ಮುಗಿಸಿ ಇಲ್ಲಿಂದ ಹೊರಡುವುದು ಕ್ಷೇಮ ಎಂದು ಶೂಮಾಕರ್ ಎಚ್ಚರಿಸಿದರು.